AS – 017

# IV Semester B.Com. Examination, April/May 2012
## (Freshers) (2011-12 & Onwards)
## ಕನ್ನಡ ಭಾಷಾ ಪತ್ರಿಕೆ– IV
## ಸಾಹಿತ್ಯ ಸಲ್ಲಾಪ–2 ಮತ್ತು ವ್ಯಾವಹಾರಿಕ ಕನ್ನಡ

Time : 3 Hours Max. Marks : 90

### ಭಾಗ - 1
### ಸಾಹಿತ್ಯ ಸಲ್ಲಾಪ - 2

I. ಭಾವಾರ್ಥವನ್ನು ಬರೆಯಿರಿ : **(1×5=5)**

ಏನು ಬಂದಿರಿ ಹದುಳವಿದ್ದಿರೆ ಎಂದರೆ

ನಿಮ್ಮ ಮೈಸಿರಿ ಹಾರಿಹೋಹುದೆ ?

ಕುಳ್ಳಿರೆಂದರೆ ನೆಲ ಕುಳಿಹೋಹುದೆ ?

ಒಡನೆ ನುಡಿದರೆ ಸಿರ ಹೊಟ್ಟೆಯೊಡೆವುದೆ ?

ಕೊಡಲಿಲ್ಲದಿದ್ದರೊಂದು ಗುಣವಿಲ್ಲದಿರ್ದಡೆ

ಕೆಡಹಿ ಮೂಗ ಕೊಯ್ಯದೆ ಮಾಣ್ಬನೆ ಕೂಡಲಸಂಗಮ ದೇವನು ?

II. ಮೂರು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ : **(3×5=15)**

1) ಬೇರೆ ಬೇರೆ ಯುಗಗಳಲ್ಲಿ ಗುರು–ಶಿಷ್ಯರ ಸಂಬಂಧದ ಬಗೆಗೆ ಅಲ್ಲಮಪ್ರಭುವಿನ ಅಭಿಪ್ರಾಯವೇನು ?

2) ಕನಸಿನ ಲೋಕದ ಗಂಡ ದಣಿದು ಬಂದ ಪತ್ನಿಯನ್ನು ಹೇಗೆ ನೋಡಿಕೊಳ್ಳುತ್ತಾನೆ ?

3) "ಟಿ. ವಿ. ಪರದೆ ಇಂದು ವಿಜ್ಞಾನದ ಅತಿ ದೊಡ್ಡ ವೈರಿಯಾಗಿ ಪರಿಣಮಿಸಿರುವುದು" ಏಕೆ ?

4) ತನ್ನ ಗಾಯ ವಾಸಿಯಾದ ಬಗೆಗೆ ಮಾರ ಹೇಳುವ ಕತೆ ಯಾವುದು ?

5) ಕೋಮುವಾದದ ಸ್ವರೂಪವನ್ನು ಬರಗೂರರು ಹೇಗೆ ವಿವರಿಸಿದ್ದಾರೆ ?

P.T.O.

III. ಮೂರು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ : (3×10=30)

1) ಪ್ರಾಮಾಣಿಕವಲ್ಲದ ಭಕ್ತಿಯನ್ನು ವಚನಕಾರರು ಹೇಗೆ ವಿಡಂಬನೆ ಮಾಡಿದ್ದಾರೆ ?

2) 'ಬೆಳದಿಂಗಳ ಪುಸ್ತಕ-ವೃಕ್ಷ – ನದಿ ' ಗಳ ಮೂಲಕ ಬುದ್ಧನ ಜೀವನ-ಸಂದೇಶಗಳನ್ನು ಹೇಗೆ ನಿರೂಪಿಸಲಾಗಿದೆ ?

3) 'ಬಿಡುಗಡೆ ' ಕಥೆಯಲ್ಲಿ ಚಿತ್ರಿತವಾಗಿರುವ ಹೆಣ್ಣಿನ ತೊಳಲಾಟದ ಸ್ವರೂಪವೇನು ?

4) ಟಿ.ವಿ. ಮಾಧ್ಯಮದಲ್ಲಿ ಗ್ರಹಣಗಳನ್ನು ಬಿಂಬಿಸುತ್ತಿರುವುದರ ಬಗೆಗೆ ಲೇಖಕರ ನಿಲುವನ್ನು ವಿವರಿಸಿ.

5) ಭಾರತದ ನಾಟಿ ವೈದ್ಯ ಪದ್ಧತಿಯ ಬಗೆಗೆ ತೇಜಸ್ವಿಯವರ ನಿಲುವನ್ನು ವಿವರಿಸಿ.

## ಭಾಗ - 2

## ವ್ಯಾವಹಾರಿಕ ಕನ್ನಡ

IV. ನಾಲ್ಕಕ್ಕೆ ಸಂಕ್ಷಿಪ್ತ ಟಿಪ್ಪಣಿ ಬರೆಯಿರಿ : (4×5=20)

1) ಕಾರ್ಯಕ್ರಮ ಪಟ್ಟಿ

2) ವಾರ್ಷಿಕ ವರದಿ

3) ವರ್ಗೀಕೃತ ಜಾಹೀರಾತು

4) ಟೆಂಡರು ಪ್ರಕಟಣೆ

5) ಜಾಹೀರಾತುಗಳಲ್ಲಿ ಅರ್ಧಸತ್ಯಗಳು

6. ವಾಕ್ ಸಂಶ್ಲೇಷಣೆ

V. ಎರಡು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ : (2×10=20)

1) ಆಹ್ವಾನ ಪತ್ರಿಕೆಯ ಲಕ್ಷಣಗಳು ಯಾವುವು ? ಕಾಲೇಜೊಂದರ ವಿದ್ಯಾರ್ಥಿಸಂಘದ ಉದ್ಘಾಟನೆಯ ಆಹ್ವಾನ ಪತ್ರಿಕೆಯನ್ನು ರೂಪಿಸಿ.

2) ಏಕವ್ಯಕ್ತಿ ವರದಿ ಎಂದರೇನು ? ಕಾಲೇಜಿನ ಗ್ರಂಥಾಲಯ ಸೌಲಭ್ಯವನ್ನು ಸುಧಾರಿಸಲು ಅಧ್ಯಾಪಕರೊಬ್ಬರು ಪ್ರಾಂಶುಪಾಲರಿಗೆ ನೀಡಿದ ವರದಿಯನ್ನು ತಯಾರಿಸಿ

3) ಪತ್ರಿಕಾ ವರದಿಯ ಯಾವುದಾದರೂ ನಾಲ್ಕು ವಿಧಗಳನ್ನು ಪರಿಚಯಿಸಿ .

4) ಜಾಹೀರಾತುಗಳು ಮಾಡುವ ಕೆಲಸಗಳನ್ನು ವಿವರಿಸಿ.